## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **(421) 387**

ಸದಸ್ಯರ ಹೆಸರು : ಡಾ: ಉಮಾಶ್ರೀ
(ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 13-08-2025

| | **ಪ್ರಶ್ನೆ** | **ಉತ್ತರ** |
|---|---|---|
| ಅ. | ಹೊರ ರಾಜ್ಯದ ವಾಹನಗಳು ಕರ್ನಾಟಕ ರಾಜ್ಯದಲ್ಲಿ ಖಾಯಂ ಆಗಿ ಚಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ.<br>ಕರ್ನಾಟಕ ರಾಜ್ಯದಲ್ಲಿ ಸಂಚರಿಸುತ್ತಿರುವ ಹೊರ ರಾಜ್ಯದ ವಾಹನಗಳ ವಿರುದ್ಧ ವಿಶೇಷ ಪ್ರವರ್ತನ ಕಾರ್ಯಗಳನ್ನು ಕೈಗೊಂಡು ಪ್ರಕರಣಗಳನ್ನು ದಾಖಲಿಸಿ ವಾಹನಗಳನ್ನು ಜಪ್ತಿಗೊಳಿಸಿ ಅಂತಹ ವಾಹನಗಳ ಮಾಲೀಕರಿಂದ ತೆರಿಗೆ ದಂಡವನ್ನು ವಸೂಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ. | ಹೊರ ರಾಜ್ಯದ ವಾಹನಗಳನ್ನು ಕರ್ನಾಟಕ ರಾಜ್ಯದಲ್ಲಿ ಬಳಸಬೇಕಾದರೆ ಇರುವ ನಿಯಮಗಳಾವುವು: | ಕರ್ನಾಟಕ ರಾಜ್ಯದಲ್ಲಿ 12 ತಿಂಗಳ ಅವಧಿಗೆ ಹೊರ ರಾಜ್ಯದ ನೊಂದಣಿ ಪ್ರಮಾಣ ಪತ್ರ ಹಾಗೂ ಇನ್ನಿತರ ದಾಖಲಾತಿಗಳೊಂದಿಗೆ ಹೊರ ರಾಜ್ಯದಲ್ಲಿ ನೊಂದಣಿಯಾದ ವಾಹನಗಳಿಗೆ ಸಂಚರಿಸಲು ಅವಕಾಶವಿರುತ್ತದೆ. ಮುಂದುವರೆದು, ಕೇಂದ್ರ ಮೋಟಾರು ವಾಹನ ಕಾಯ್ದೆ 1988 ರ ಕಲಂ 47 ರಲ್ಲಿರುವ ನಿಯಮಗಳನ್ವಯ 12 ತಿಂಗಳು ಮೀರಿದ ವಾಹನಗಳನ್ನು ರಾಜ್ಯದಲ್ಲಿನ ತೆರಿಗೆಯನ್ನು ನಿಯಮಾನುಸಾರ ಪಾವತಿಸಿ ಮರು ನೊಂದಾಣಿ ಮಾಡಿಸಿ ರಾಜ್ಯದಲ್ಲಿ ಸಂಚರಿಸಬಹುದಾಗಿರುತ್ತದೆ. |
| ಇ. | ನಿಯಮಬಾಹಿರವಾಗಿ ಬಳಸುವ ಹೊರ ರಾಜ್ಯದ ವಾಹನಗಳ ಮೇಲೆ ದಂಡ ವಿಧಿಸಲಾಗಿದೆಯೇ: ಎಷ್ಟು ವಾಹನಗಳಿಂದ ದಂಡ ವಸೂಲಿ ಮಾಡಲಾಗಿದೆ? | ಹೊರ ರಾಜ್ಯದಲ್ಲಿ ನೊಂದಣಿಯಾಗಿರುವ ವಾಹನಗಳು ರಾಜ್ಯದಲ್ಲಿ ತೆರಿಗೆ ಪಾವತಿಸದೇ ಅನಧಿಕೃತವಾಗಿ ಸಂಚರಿಸುತ್ತಿರುವುದು ಕಂಡು ಬಂದಲ್ಲಿ ಅವುಗಳನ್ನು ಜಪ್ತಿಗೊಳಿಸಿ ನಿಯಮಾನುಸಾರ ಪ್ರಕರಣಗಳನ್ನು ದಾಖಲಿಸಿ ತೆರಿಗೆ ದಂಡವನ್ನು ವಸೂಲಿ ಮಾಡಲಾಗುತ್ತಿದೆ. ಇಂತಹ ವಾಹನಗಳಿಂದ ಸಂಗ್ರಹಿಸಿರುವ ತೆರಿಗೆ ಮತ್ತು ದಂಡದ ವಿವರ ಈ ಕೆಳಗಿನಂತಿದೆ. |

**ದಾಖಲಾದ ಪ್ರಕರಣಗಳು**

| ವಾಹನಗಳು | **ತೆರಿಗೆ** | **ದಂಡ** |
|---|---|---|
| 5790 | ರೂ.18,80,12,219/- | ರೂ.8,50,66,076/- |

**ಟಿಡಿ 54 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು